(ಶ್ರೀ ಕೆ. ಲಕ್ಕಪ್ಪ)

ರಸ್ತೆಯಿಂದ ಜನರಿಗೆ ಹೆಚ್ಚು ಉಪಯೋಗವಾಗುತ್ತದೆ ಎನ್ನುವುದನ್ನು ತಿಳಿಸಬೇಕು ಎಂದು ಸೂಪರಿಂಟೆಂಡಿಂಗ್ ಇಂಜಿನಿಯರ್ ಅವರಿಗೆ ಬರೆದಿದ್ದೇವೆ. ಮಳೆಗಾಲ ಮುಗಿದ ಮೇಲೆ ಸರ್ವೆ ಮಾಡುತ್ತೇವೆ ಎಂದು ತಿಳಿಸಿದ್ದಾರೆ. ಈಗ ಮಳೆಗಾಲ ಮುಗಿದು ಹೋಗಿದೆ. ಇಷ್ಟರಲ್ಲಿಯೇ ಸರ್ವೇ ಮಾಡಿ ರಿಪೋರ್ಟ್ ಮಾಡುತ್ತಾರೆ.

ಶ್ರೀ ಎಸ್. ಎಚ್. ಪುಟ್ಟರಂಗನಾಥ.—ಉತ್ತರ (ಅ) ನಲ್ಲಿ ಈ ರಸ್ತೆಯು ಹೆಗ್ಗಾಡೆ, ನರ್ವೆ ಮತ್ತು ತುಂಬೆವೇರಹಳ್ಳಿಗಳ ಮಾರ್ಗವಾಗಿ ಹೋಗುತ್ತದೆ ಎಂದು ಹೇಳಿದೆ. ಆದರೆ ಕೊರಲಗಡ್ಡೆ ಮೂಲಕವಾಗಿ ಈ ರಸ್ತೆ ಹೋಗುವುದರಿಂದ ಅನೇಕ ಹಳ್ಳಿಗಳಿಗೆ ಅನುಕೂಲವಾಗುತ್ತದೆ ಎನ್ನುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಲಕ್ಕಪ್ಪ.—ನಮಗೆ ಬಂದಿರುವ ರಿಪೋರ್ಟ್ ಪ್ರಕಾರ ಈ ರಸ್ತೆ ನರ್ವೆ ಮೂಲಕ ಹೋಗುತ್ತದೆ. ಅದಿದೆ ಈ ಗಾಗಲೇ ಹತ್ತು ಅಡಿ ರಸ್ತೆ ಇದೆ. ಅಗಲ ಮಾಡತಕ್ಕಂಥ ಕೆಲಸಕ್ಕೆ ಖರ್ಚು ಮಾಡಿ ಕೆಲಸ ಮುಂದುವರಿಯಬೇಕಾಗಿದೆ. ಕೊರಲಗದ್ದೆ ಮೂಲಕ ಎಷ್ಟು ಖರ್ಚು ಬೀಳುತ್ತದೆ ಎನ್ನುವುದನ್ನು ಸರ್ವೆ ಮಾಡಿ ತಿಳಿಸಬೇಕು ಎಂದು ಕೇಳಿದ್ದೇವೆ.

ಶ್ರೀ ಎಸ್. ಎಚ್. ಪುಟ್ಟರಂಗನಾಥ.—ಕೊರಲಗಡ್ಡೆ ರೋಡು ಫಾರ್ಮ್ ಆಗಿದೆ ಎಂದು ಹೇಳಿದಿರಿ. ಅದು ನಿಜವೇ ?

ಶ್ರೀ ಕೆ. ಲಕ್ಕಪ್ಪ.—ನನಗೆ ಅದು ಸರಿಯಾಗಿ ಗೊತ್ತಿಲ್ಲ. ಪ್ರಾಯಶಃ ಬರಗಾಲ ಕಾಮಗಾರಿಯಲ್ಲಿ ಖರ್ಚು ಮಾಡಿ ರಿಲೀಫ್ ವರ್ಕ್ ಮಾಡಿದ್ದಾರೆಯೋ ಅದು ನನಗೆ ಗೊತ್ತಿಲ್ಲ.

ಶ್ರೀ ಬಿ. ಪಿ. ಗಂಗಾಧರ.—ಸರಕಾರದ ಎಲ್ಲಾ ಕೆಲಸ ಕಾರ್ಯಗಳು ಡಿಲೇ ಆಗುತ್ತಿರುತ್ತಿವೆ. ಇಂಟರೆಸ್ಟೆಡ್ ಕಂಟ್ರಾಕ್ಟರರಿಗೆ ಕೆಲಸ ಕೊಡುತ್ತಾರೆ. ಅವರು ಸರಿಯಾಗಿ ಕೆಲಸಕಾರ್ಯ ಮಾಡುವುದಿಲ್ಲ. ಆದುದರಿಂದ ಸರಿಯಾಗಿ ಕೆಲಸ ಮಾಡತಕ್ಕಂಥ ಬೇರೆ ಕಂಟ್ರಾಕ್ಟರರಿಗೆ ಕೊಟ್ಟು ಕೆಲಸ ಮಾಡಿಸುತ್ತೀರಾ ?

ಶ್ರೀ ಕೆ. ಲಕ್ಕಪ್ಪ.—ಅದು ಈ ಪ್ರಶ್ನೆಯಿಂದ ಉದ್ಭವವಾಗುವುದಿಲ್ಲ.

National Highway No.4 Section Mysore-Maharashtra Border to Bangalore

12. Sri H. SIDDAVEERAPPA (Harihar).—

Will the Minister for Public Works be pleased to state :—

(*a*) whether it has come to the notice of Government that the National Highway No. 4, Section Mysore Maharashtra Border to Bangalore is in urgent need of strengthening and widening culverts and pavements ;

(*b*) if so, whether any survey has been made in this behalf;

(*c*) whether the World Bank was approached for providing funds for this purpose ; if so, what is the estimated amount ;

(*d*) whether a team of the World Bank visited the State for this purpose for investigation;

(*e*) if so, the result of the same ?

Sri K. LAKKAPPA (Minister for Public Works).—

(*a*) Yes.

(*b*) Preliminary survey has been done.

(*c*) Yes; Rs. 12-50 crores approximately.

(*d*) Yes.

(*e*) The matter is still being pursued with Government of India.

Sri H. SIDDAVEERAPPA.—When did the preliminary survey take place?

† Sri K. LAKKAPPA.—In the month of August some representative of the World Bank had been here and before he came here, there was a requst from the Government of India to supply information. Just before he came, here, we made a preliminary survey, only a broad survey has been done. Probably one or two months earlier than August.

Sri H. SIDDAVEERAPPA.—How much time are you likely to take to finalise the deal?

Sri K. LAKKAPPA.—That is only a temporary survey. Now we have arranged for regular survey. Keeping that in view, we have recently sanctioned two divisions and four sub-divisions. Now they have already started their work. We have stipulated four months time for this work. By that time, they must be able to do it. If for any reason, they want an extension, we are likely to consider it.

ಶ್ರೀ ಎಸ್. ಎಂ. ಗುರೆಡ್ಡಿ.—ಸ್ಯಾಮಿ, ನ್ಯಾಷನಲ್ ಹೈವೇಯಲ್ಲಿ ಮೇಲಿಂದ ಮೇಲೆ ಆಕ್ಸಿಡೆಂಟ್ ಆಗುತ್ತಿರುತ್ತದೆ. ಮತ್ತು ಈ ಕೆಲಸಕ್ಕೆ ಒಂದುವೇಳೆ ವರ್ಲ್ಡ್ ಬ್ಯಾಂಕ್‌ನವರು ಸಹಾಯ ಮಾಡದೇ ಹೋದರೆ ಕೇಂದ್ರ ಸರ್ಕಾರದವರು ಸಹಾಯಮಾಡುವುದಕ್ಕೆ ತಯಾರಾಗಿದ್ದಾರೆಯೇ?

ಶ್ರೀ ಕೆ. ಲಕ್ಕಪ್ಪ.—ವರ್ಲ್ಡ್ ಬ್ಯಾಂಕ್‌ನವರು ಸಹಾಯ ಮಾಡದಿದ್ದರೆ ಈ ಕೆಲಸವನ್ನು ನಿಲ್ಲಿಸುವುದಕ್ಕಾಗುವುದಿಲ್ಲ. ಕೇಂದ್ರ ಸರ್ಕಾರದವರು ಅಗಾಗೆ ಸಾಲವನ್ನು ಕೊಡ ತ್ತಿದ್ದಾರೆ. ಎಲ್ಲೆಲ್ಲ ವ್ಯಾಜಕ್ಟ್‌ಗಳನ್ನು ದೊಡ್ಡದು ಮಾಡಬೇಕಾಗಿದೆಯೋ, ಎಲ್ಲೆಲ್ಲಿ ರಸ್ತೆಗಳನ್ನು ವಿಶಾಲ ಮಾಡಬೇಕಾಗಿದೆಯೋ ಅದಕ್ಕೆಲ್ಲಾ ನಾವು ಎಸ್ಟಿಮೇಟ್ ಮಾಡಿ ಕಳುಹಿಸಿದ್ದೇವೆ.

Sri SIDDIAH KASIMATH.—May I know the remarks of the World Bank Team which visited the State?

Sri K. LAKKAPPA.—They did not come here only to gather some information. They wanted particulary to see that the Mysore Government take necessary action. They wanted to know what the administrative unit for this National Highway was. Now there is a Chief Engineer to look after all these things and that information has been furnished to them. Now we are making a regular survey. After the survey, we will be putting this report before the team and then they will be taking a final decision.

Sri D. DEVARAJ URS.—Is it the responsibility of the Government of India to maintain this road? If so, has any grant been given for the maintenance or extension or repair of National Highway No. 4? Has that grant been given to the Mysore State Government for being spent over maintenance?

† Indicates that the remarks or speeches have not been revised by the member concerned

Sri K. LAKKAPPA.—It is true that it is the responsibility of the Government of India to maintain and develop these National Highways. Accordingly for Davanagere-Haribar road, grant has been given to the Mysore Government and the mileage grant of Rs. 3,000 has now been enhanced to nearly Rs. 5,000.

ಶ್ರೀ ಎಂ. ನಾಗಪ್ಪ.—ಸ್ವಾಮಿ, ಈ ಕೆಲಸಕ್ಕಾಗಿ ಒಂದು ಅಂದಾಜು ಮೊಬಲಗು 12.50 ಕೋಟಿ ರೂಪಾಯಿಗಳು ಎಂದು ಹೇಳಿದ್ದೀರಿ. ಇದರಲ್ಲಿ ಏನಾದರೂ ಕೇಂದ್ರ ಸರ್ಕಾರದವರು ಕೊಡತಕ್ಕಂಥ ಹಣ ಇದೆಯೇ? ಈ ಸಂಪೂರ್ಣವಾದ ಹಣವನ್ನು ವಿಶ್ವಬ್ಯಾಂಕಿನವರು ಕೊಡಬೇಕಾದರೆ ಇದು ಕೇಂದ್ರ ಸರ್ಕಾರದ ಜವಾಬ್ದಾರಿಮೇಲೆ ಕೊಡುತ್ತಾರೋ ಅಥವಾ ರಾಜ್ಯ ಸರ್ಕಾರದ ಜವಾಬ್ದಾರಿ ಮೇಲೆ ಕೊಡುತ್ತಾರೋ?

Sri K. LAKKAPPA.—It is not the responsibility of the State Government. It is the responsibility of the Government of India. The World Bank will come to the assistance of the Government of India and the Government of India, in turn, will pay us. Then we will attend to the work. We do not come to the picture at all.

Sri B. B. SAYANAK.—May I know what the length and breadth of the road is?

Sri K. LAKKAPPA.—I do not know exactly what the length and breadth is.

ಶ್ರೀ ಎನ್. ಎಲ್. ಬೆಲ್ಲದ.—ರಾಣಿಬೆನ್ನೂರಿನಲ್ಲಿ ಊರಿನ ಮಧ್ಯದಲ್ಲಿ ಈ ರಸ್ತೆಯನ್ನು ತೆಗೆದು ಕೊಂಡು ಹೋಗಿರುವುದರಿಂದ, ಅನೇಕ ಅಪಘಾತಗಳು ಆಗುತ್ತಿವೆ. ಆದುದರಿಂದ ಇದನ್ನು ಊರಿನ ಮೇರ್ಬ್ಯಾಗದಲ್ಲಿ ತೆಗೆದುಕೊಂಡು ಹೋಗಲು ಸರ್ಕಾರ ವಿಚಾರ ಮಾಡುತ್ತದೆಯೇ? ಇದು ಈಗಾಗಲೇ ಸರ್ಕಾರದ ಗಮನಕ್ಕೆ ಬಂದಿಲ್ಲವೇ?

ಶ್ರೀ ಕೆ. ಲಕ್ಕಪ್ಪ.—ಕೆಲವು ಪಟ್ಟಣಗಳಲ್ಲಿ ಆ ರೀತಿ ನ್ಯಾಷನಲ್ ಹೈವೇ ಹಾದುಹೋಗುತ್ತಾ ಇದೆ. ಅದನ್ನು ಬೈಪಾಸ್ ಮಾಡಿ ಹೋಗುವುದಕ್ಕೆ ಒಂದು ಎಸ್ಟಿಮೇಟನ್ನು ತಯಾರುಮಾಡುತ್ತಾ ಇದ್ದೇವೆ. ದಾವಣಗೆರೆ, ಹರಿಹರದಲ್ಲಿ ಊರಿನಿಂದ ಹೊರಗೆ ಹಾದು ಹೋಗುವ ರಸ್ತೆ ಮಾಡುತ್ತಾ ಇದ್ದಾರೆ. ರಾಣಿಬೆನ್ನೂರು ಬಗ್ಗೆ ನನಗೆ ಜ್ಞಾಪಕ ಮಾಡಿದ್ದು ಒಳ್ಳೆಯದಾಯಿತು. ಅದನ್ನು ವಿಚಾರ ಮಾಡುತ್ತೇನೆ. ಅದನ್ನು ತೆಗೆದುಕೊಳ್ಳದೇ ಇದ್ದರೆ ಅಂತಹ ಕಡೆಗಳಲ್ಲೂ ರಸ್ತೆಗಳ ಕೆಲಸ ಮಾಡುವುದನ್ನು ವಿಚಾರ ಮಾಡುತ್ತೇವೆ.

ಶ್ರೀ ಹೆಚ್. ಬಿ. ಪ್ಯಾಲನಯ್ಯ.—ಈ ವಿಷಯದ ಬಗ್ಗೆ ಭಾರತ ಸರ್ಕಾರದೊಡನೆ ಏನು ಪರಿಶೀಲಸಲಾಗುತ್ತಿದೆ? ನಿಮ್ಮ ಪ್ರಯತ್ನಕ್ಕೆ ಅವರು ಆಗುವುದಿಲ್ಲ ಎಂದು ಹೇಳಿದ್ದಾರೆಯೇ? ನೀವು ಮಾಡಿರುವ ಪ್ರಯತ್ನವೇನು? ಅವರು ಮಾಡಿರುವ ಕೆಲಸ ಏನು ತಿಳಿಸುತ್ತೀರಾ?

ಶ್ರೀ ಕೆ. ಲಕ್ಕಪ್ಪ.—ಕೇಂದ್ರ ಸರ್ಕಾರದವರು ಆಗುವುದಿಲ್ಲ ಎಂದು ಹೇಳಲಿಲ್ಲ. ಈಗ ಮಾಡಿರುವ ಅಂದಾಜು ಪ್ರಕಾರ ಸುಮಾರು 12½ ಕೋಟಿ ರೂಪಾಯಿಗಿಂತಲೂ ಜಾಸ್ತಿ ಬೇಕಾಗುತ್ತದೆ. ಇದನ್ನು ಸರಿಪಡಿಸಬೇಕಾದರೆ ಇಷ್ಟು ಹಣ ಬೇಕು ಎಂದು ಕೇಳಿದ್ದೇವೆ. ವರ್ಲ್ಡ್ ಬ್ಯಾಂಕ್‌ನವರು ಹಣ ಕೊಡುವುದಕ್ಕೆ ಮುನ್ನ ನಾವು ರೆಗ್ಯುಲರ್ ಸರ್ವೆ ಮಾಡಿ ಈ ಕೆಲಸಕ್ಕೆ ಎಷ್ಟು ಖರ್ಚಾಗುತ್ತದೆ ಎನ್ನುವುದನ್ನು ನಾವು ಫರ್ನಿಷ್ ಮಾಡಬೇಕು. ಆ ದೃಷ್ಟಿಯಿಂದ ಎರಡು ಸ್ಪೆಷಲ್ ಸರ್ಕಲ್ ಡಿವಿಷನ್ ಮಾಡಿದ್ದೇವೆ. ಸರ್ವೆ ಆಗುತ್ತಾ ಇದೆ. ಇದು ಪೂರ್ತಿಮಾಡಿದ ಮೇಲೆ, ಇದರ ಸಮೀಕ್ಷೆಯನ್ನು ಕೇಂದ್ರ ಸರ್ಕಾರದವರಿಗೂ ಮತ್ತು ವರ್ಲ್ಡ್ ಬ್ಯಾಂಕ್‌ನವರಿಗೂ ಕಳುಹಿಸುತ್ತೇವೆ.

Sri G. DUGGAPPA.—There is one Division in Chitradurga in order to make investigations about National Highway No. 4 and it has submitted various reports for the last four years. May I know what has happened to those reports? Have any of them been implemented? Have the recommendations been entrusted to the regular Division for being implemented?

ಶ್ರೀ ಕೆ. ಲಕ್ಕಪ್ಪ.—ಇದಕ್ಕಿಂತ ಮುನ್ನ ಸ್ಪೆಷಲ್ ನಬ್ ಡಿವಿಷನ್ ಇರಲಿಲ್ಲ. ಇರತಕ್ಕಂಥ ರೆಗ್ಯುಲರ್ ಡಿವಿಷನ್‌ನಲ್ಲೇ ಕೆಲಸ ಮಾಡಬೇಕಾಗಿತ್ತು. ಆದುದರಿಂದ ಇದರ ಬಗ್ಗೆ ಏನು ವರದಿ ತಯಾರು ಮಾಡಿ ಕಳುಹಿಸಬೇಕಾಗಿತ್ತೊ ಅದನ್ನು ತಯಾರು ಮಾಡಿ ಕಳುಹಿಸಿದ್ದೇವೆ.

ಶ್ರೀ ಎಂ. ಎಸ್. ಕೃಷ್ಣನ್.—ಸ್ವಾಮಿ, ವಿಶ್ವಬ್ಯಾಂಕಿನವರಿಂದ 12½ ಕೋಟಿ ರೂಪಾಯಿ ಕೇಳಿದ್ದೀರಲ್ಲಾ ಅವರು ಯಾವ ಆಧಾರದಮೇಲೆ ಕೊಡುತ್ತಾರೆ? ಏನು ಕಂಡೀಷನ್ಸ್ ಹಾಕಿದ್ದಾರೆ? ಆ ಕಂಡೀಷನ್ಸ್ ಏನೇನು ಎನ್ನುವುದನ್ನು ತಿಳಿಸುತ್ತೀರಾ?

ಶ್ರೀ ಕೆ. ಲಕ್ಕಪ್ಪ.—ಅದರಲ್ಲಿ ಕಂಡೀಷನ್ಸ್ ಏನೂ ಇಲ್ಲ. ನ್ಯಾಷನರ್ ಶೈವೇ ಎನ್ನುವುದು ಯಾವರೀತಿ ರಾಜ್ಯದಲ್ಲಿ ನಡೆಯುತ್ತಾ ಇದೆ, ಅದರ ಅಡ್ಮಿನಿಸ್ಟ್ರೇಷನ್‌ಗೆ ಸ್ಪೆಷಲ್ ಆಗಿ ಒಬ್ಬ ಚೀಫ್ ಇಂಜನೀಯರ್ ಇದ್ದಾರೆಯೇ ಆ ಚೀಫ್ ಇಂಜನೀಯರ್ ಇವುಗಳನ್ನೆಲ್ಲಾ ವಿಚಾರ ಮಾಡುತ್ತಾರೆಯೇ ಇದಕ್ಕೆ ಎಷ್ಟು ಹಣ ಬೇಕಾಗುತ್ತದೆ, ಮತ್ತು ಅದರಲ್ಲಿ ವಾಹನಗಳು ಎಷ್ಟು ಓಡಾಡುತ್ತಾ ಇವೆ, ಇದಕ್ಕೆ ಹೆಚ್ಚು ಪ್ರಿಯಾರಿಟಿ ಕೊಡಬೇಕಾದ ಅವಶ್ಯಕತೆ ಇದೆಯೇ ಇದನ್ನೆಲ್ಲಾ ಪರಿಶೀಲನೆ ಮಾಡುತ್ತಾರೆ.

ಶ್ರೀ ಹೆಚ್. ಸಿದ್ದವೀರಪ್ಪ.—ಸ್ವಾಮಿ, ಹರಿಹರ, ದಾವಣಗೆರೆಯಲ್ಲಿ ಊರಿನ ಹೊರಗಡೆ ಹಾದು ಹೋಗುವ ರಸ್ತೆಗಳನ್ನು ಮಾಡುತ್ತಾ ಇದ್ದೇವೆ ಎಂದು ಹೇಳಿದಿರಿ. ನುಮಾರು 6-7 ವರ್ಷದಿಂದಲೂ ತುಂಗಭದ್ರಾ ನದಿಗೆ ಅಡ್ಡ ಹಾಕಿರುವಂಥ ಸೇತುವೆಯ ಕೆಲಸವನ್ನು ನೀವು ಒಬ್ಬ ಖರಾಬು ಕಂಟ್ರಾಕ್ಟರಿಗೆ ಕೊಟ್ಟಿರುವುದರಿಂದ ಆ ಕೆಲಸ ಯಾವ ಪ್ರಮಾಣದಲ್ಲಿ ಆಗಬೇಕಾಗಿತ್ತೊ ಅದು ಆಗದೆ ತಡವಾಗುತ್ತಾ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಕೆ. ಲಕ್ಕಪ್ಪ.—ನಾನು ಸ್ವಾಟ್‌ಗೆ ಹೋಗಿ ಪರಿಶೀಲನೆ ಮಾಡಿಕೊಂಡು ಬಂದಿದ್ದೇನೆ. ಮೊದಲು ಆ ಸೇತುವೆಯ ಕೆಲಸ ನಿಧಾನವಾಗಿತ್ತು, ಎನ್ನುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಇತ್ತೀಚೆಗೆ ಅದು ಭರದಿಂದ ಕೆಲಸ ನಡೆಯುತ್ತಾ ಇದೆ. ಇದಕ್ಕೆ 2-3 ಸ್ಪ್ಯಾನ್‌ಗಳು ಬೇಕಾಗಿವೆ. ಅದರ ಫೌಂಡೇಷನ್ ಕೂಡ ಆಗಿದೆ. ಅದನ್ನು ಅದಷ್ಟು ಜಾಗ್ರತೆ ಮಾಡುತ್ತಾರೆಂದು ನಾನು ಭರವಸೆ ಕೊಡುತ್ತೇನೆ.

ಶ್ರೀ ಎನ್. ಹುಚ್ಚಮಾಸಿಗೌಡ.—ಸ್ವಾಮಿ, ಕೇಂದ್ರ ಸರ್ಕಾರದವರು ರಸ್ತೆಗಳಿಗೆ ಕೂಡ ತಕ್ಕಂಥ ಹಣ ಪೂರ್ಣವಾಗಿ ರಸ್ತೆಗಳಿಗೆ ಖರ್ಚಾಗಲಿಲ್ಲ ಎನ್ನುವ ಅಕ್ಷೇಪಣೆ ಇದೆ. ಅದರಲ್ಲಿ ಸತ್ಯಾಂಶ ಇದೆಯೇ ಏನು ಎಂದು ತಿಳಿಸುತ್ತೀರಾ?

ಶ್ರೀ ಕೆ. ಲಕ್ಕಪ್ಪ.—ಅದರಲ್ಲಿ ಸತ್ಯಾಂಶ ಏನೂ ಇಲ್ಲ.

Bazaar tax collected and credited to Tumminakatte Panchayat Fund

17. Sri N. L. BELLAD (Ranibennur).—

Will the Minister for Development be pleased to state :—

(*a*) whether bazaar tax collected by the Tumminakatte Panchayat Committee since 1966 has been credited to the Panchayat fund ;

(*b*) the amount of bazaar tax collected and credited to the Panchayat fund every year from 1961 to end of March 1969 ;

(*c*) if the bazaar tax has not been credited to the Panchayat fund, the action taken against the concerned officials ;

(*d*) whether investigation will be made through Vigilance Commission regarding misappropriation of money in the said Panchayat since 1964 and the report published ?